ಒ.ಎಸ್ ನಂಃ **193/2022**
ಡಿ.<u>ಡಬ್ಲ್ಯೂಃ 2</u>

ದಿನಾಂಕಃ **17-01-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **1** ಮತ್ತು **2** ನೇ ಪ್ರತಿವಾದಿಯ ಪರ ಶ್ರೀ ಜಿ.ಎಸ್.ಎನ್ ವಕೀಲರಿಂದಃ</u>

ನಾನು 8 ನೇ ತರಗತಿ ವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಪ್ರಮಾಣ ಪತ್ರವನ್ನು ಯಾರ ಮಾಹಿತಿ ಮೇರೆಗೆ ತಯಾರಿಸಲಾಗಿದೆ ಎಂದರೆ ಸಾಕ್ಷಿ ನನ್ನ ಅತ್ತೆ ಮಂಜುಳಾ ರವರು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿದೆ ಎಂದು ನುಡಿಯುತ್ತಾರೆ. ನಾನು ಕಾಳಬೆಳಗುಂದಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಈ ದಾವೆಯನ್ನು ಸರ್ವೆ ನಂ.93 ರಲ್ಲಿನ ಎರಡು ಹಿಸ್ಸೆಗಳು ಹಾಗೂ ಸರ್ವೆ ನಂ.98 ರ ಜಮೀನಿಗೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ. ಸದರಿ ಜಮೀನುಗಳು ಗುಂಜನೂರು ಗ್ರಾಮದಲ್ಲಿ ಇದ್ದಾವೆ. ಸದರಿ ಜಮೀನುಗಳು ಮೂಲತಃ 5 ನೇ ಪ್ರತಿವಾದಿಯ ತಾಂತ ನಿಂಗಾರೆಡ್ಡಿ ರವರ ಹೆಸರಿನಲ್ಲಿ ಇದ್ದವು. ನಾನು ನಿಂಗಾರೆಡ್ಡಿ ರವರ ಹೆಸರಿನಲ್ಲಿ ಇರುವ ಜಮೀನು ದಾಖಲಾತಿಗಳನ್ನು ನೋಡಿಲ್ಲ.

2. ಈ ದಾವೆಯ ವಾದಿ-ಪ್ರತಿವಾದಿಯರು ನನ್ನ ಸಂಬಂಧಿಕರಾಗಿರುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿ ನನ್ನ ಅತ್ತೆ ಅಂದರೆ ನನ್ನ ಸೋದರ ಮಾವನ ಹೆಂಡತಿಯಾಗಿರುತ್ತಾರೆ. ವಾದಿ-ಪ್ರತಿವಾದಿಯರ ಕುಟುಂಬಕ್ಕೆ ಸುಮಾರು 12-18 ಎಕರೆ ಜಮೀನು ಹಾಗೂ ಒಂದು ಮನೆ ಇರುತ್ತದೆ. ಸದರಿ ಎಲ್ಲಾ ಆಸ್ತಿಗಳು ಗುಂಜನೂರು ಗ್ರಾಮದಲ್ಲಿ ಇದ್ದಾವೆ. ಸರ್ವೆ ನಂ.93 ರಲ್ಲಿ 10 ಎಕರೆ ಚಿಲ್ಲರೆ ಗುಂಟೆ ಜಮೀನು ಇದೆ. ಸರ್ವೆ ನಂ.93 ರಲ್ಲಿನ ಜಮೀನು ಹಿಂದೆ ನೀಲಮ್ಮ ಗಂಡ ಶಂಕ್ರಪ್ಪ ಪೋತಾಳ ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಬಸಮ್ಮ ರವರು ಸದರಿ ನೀಲಮ್ಮ ರವರ ಒಬ್ಬರೇ ಮಗಳಾಗಿರುತ್ತಾಳೆ ಎಂದರೆ ಸರಿ. ನೀಲಮ್ಮ ರವರಿಗೆ ಬಸಮ್ಮ ರವರನ್ನು ಹೊರತು ಪಡಿಸಿ ಬೇರೆ ಸಂತಾನ ಇರಲಿಲ್ಲ ಎಂದರೆ ಸರಿ. ಸದರಿ ಜಮೀನು 1954 ರಿಂದ 1990 ವರೆಗೆ ನೀಲಮ್ಮ ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಬಸಮ್ಮ ರವರ ಮದುವೆಯಾದ

ನಂತರ ನೀಲಮ್ಮ ರವರನ್ನು ನೋಡಿಕೊಳ್ಳಲು ಯಾರು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ಸದರಿ ನೀಲಮ್ಮ ರವರನ್ನು ಅವರ ವೃದ್ಧ್ಯಾಪ್ಯದಲ್ಲಿ ನೋಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಮ್ಮನ್ನು ಇಳಿ ವಯಸ್ಸಿನಲ್ಲಿ ನೋಡಿಕೊಳ್ಳುತ್ತಿದ್ದರಿಂದ ನೀಲಮ್ಮ ರವರು 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ದಿನಾಂಕ 22.04.1987 ರಂದು ಮರಣ ಶಾಸನ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ 1989 ರಲ್ಲಿ ಸದರಿ ನೀಲಮ್ಮ ರವರು ಮರಣಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ನಂತರ 1 ಮತ್ತು 2 ನೇ ಪ್ರತಿವಾದಿಯರು ಮರಣ ಶಾಸನದ ಪ್ರಕಾರ ತಮ್ಮ ಹೆಸರಿಗೆ ಆಸ್ತಿ ವರ್ಗಾವಣೆ ಮಾಡುಂತೆ ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಕಂದಾಯ ಇಲಾಖೆಯವರು ವಿಚಾರಣೆ ನಡೆಸಿ ದಿನಾಂಕ 27.01.1991 ರಂದು 1 ಮತ್ತು 2 ನೇ ಪ್ರತಿವಾದಿಯರ ಪರವಾಗಿ ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಿಂದ 1 ಮತ್ತು 2 ನೇ ಪ್ರತಿವಾದಿಯರೇ ಸರ್ವೆ ನಂ.93/1 ಹಾಗೂ 93/2 ರಲ್ಲಿನ ಜಮೀನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಇರಬಹುದು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ಮರಣ ಶಾಸನದ ಪ್ರಕಾರ ಆಸ್ತಿ ಪಡೆದುಕೊಂಡಿರುವುದು ಗೊತ್ತಿದ್ದರೂ ಸಹ ನಾನು 5 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ